ಪೊಲೀಸ್ ಠಾಣಾಧಿಕಾರಿಗಳಿಗೆ ಅಪರಾಧಗಳನ್ನು ತಡೆಗಟ್ಟಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. ಅಲ್ಲದೆ, ರಾತ್ರಿ ಮತ್ತು ಹಗಲು ಗಸ್ತು ಕರ್ತವ್ಯವನ್ನು ನಿರ್ವಹಿಸಲು ಕಟ್ಟುನಿಟ್ಟಿನ ಕ್ರಮವನ್ನು ಸಹ ಕೈಗೊಳ್ಳಲಾಗಿದೆ. ಅಪರಾಧಗಳನ್ನು ತಡೆಗಟ್ಟಲು ನುರಿತ ಸಿಬ್ಬಂದಿಗಳ ವಿಶೇಷ ತಂಡಗಳನ್ನು ರಚಿಸಿ ಅಪರಾಧತಡೆ ಮಾಸ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನಸಾಮಾನ್ಯರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ ಮೂಲಕ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟಲು ಮತ್ತು ಶೀಘ್ರವಾಗಿ ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗಿದೆ.

ವಿಜಯನಗರ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

170 (479) ಶ್ರೀ ಎಂ. ಕೃಷ್ಣಪ್ಪ (ವಿಜಯನಗರ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಬೇಸಿಗೆಯಲ್ಲಿ ಸಮರ್ಪಕ ಕುಡಿಯುವ ನೀರು ವಿತರಣೆ ಮಾಡಲು ಕೈಗೊಂಡ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹೌದು.

ಆ) ವಿಜಯನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 23,000 ಸಂಪರ್ಕಗಳಿದ್ದು, ಈ ಕ್ಷೇತ್ರದಲ್ಲಿ ಪ್ರತಿ ನಾಗರೀಕರಿಗೆ ದಿನಂಪ್ರತಿ ಸರಾಸರಿ 100 ಲೀಟರ್ ನೀರು ಸರಬರಾಜಾಗುತ್ತಿರುತ್ತದೆ. ಬೇಸಿಗೆ ಸಮಯದಲ್ಲಿ ನೀರಿನ ಬೇಡಿಕೆ ಸರಿದೂಗಿಸಲು ಹಾಲಿ ಇರುವ 217 ವಿದ್ಯುತ್ ಚಾಲಿತ ಕೊಳವೆ ಬಾವಿಗಳು ಹಾಗೂ 223 ಕೈಚಾಲಿತ ಕೊಳವೆ ಬಾವಿಗಳ ಜೊತೆಗೆ ಹೊಸದಾಗಿ 33 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಇದಲ್ಲದೇ ತುರ್ತು ಸಮಯದಲ್ಲಿ ನೀರು ಸರಬರಾಜು

ಮಾಡಲು 4 ಲಾರಿ ಟ್ಯಾಂಕರ್‌ಗಳಿದ್ದು, ಇವುಗಳಿಂದಲೂ ಸಹ ನೀರು ಸರಬರಾಜು ಮಾಡುತ್ತಿರುತ್ತದೆ.

ಕೊಳಚೆ ಪ್ರದೇಶದ ನಿವಾಸಿಗಳು ಹಾಗೂ ಬಡಜನರು ವಾಸಿಸುವ ಸ್ಥಳಗಳಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ 521 ಸಾರ್ವಜನಿಕ ಕೊಳಾಯಿಗಳಿಂದ ನೀರು ವಿತರಣೆ ಮಾಡಲಾಗುತ್ತಿರುತ್ತದೆ.

ಇ)

1. ನಗರದಲ್ಲಿ ಮುಖ್ಯ ನೀರು ಸರಬರಾಜು ಸ್ಥಾವರಗಳಾದ ಸಿ.ಜೆ.ಎಫ್ ಮಲ್ಲೇಶ್ವರಂ, ಎಲ್.ಎಲ್.ಆರ್ ರೇಸ್‌ಕೋರ್ಸ್ ರಸ್ತೆ, ಹೆಗ್ಗನಹಳ್ಳಿ, ಹೊಸಹಳ್ಳಿ ಮತ್ತು ಹೆಚ್.ಜಿ.ಆರ್ ಹೈಗ್ರೌಂಡ್ಸ್ ಸ್ಥಳಗಳಲ್ಲಿ ನೀರು ಸರಬರಾಜು ಅಡಚಣೆ ಇಲ್ಲದೆ ಕಾರ್ಯನಿರ್ವಹಿಸಲು ವಿದ್ಯುತ್ ಜನರೇಟರ್‌ಗಳನ್ನು ಅಳವಡಿಸಲಾಗಿದೆ.
2. ತುರ್ತು ನೀರಿನ ಸಮಸ್ಯೆಯನ್ನು ನೀಗಿಸಲು ನಗರದಲ್ಲಿ 45 ಲಾರಿ ನೀರಿನ ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
3. ದುರಸ್ಥಿಯಲ್ಲಿರುವ ಕೊಳವೆ ಬಾವಿಗಳನ್ನು ತುರ್ತಾಗಿ ದುರಸ್ಥಿಗೊಳಿಸಿ ಸೇವೆಗೆ ಪುನರ್ ಕಲ್ಪಿಸಲಾಗುತ್ತಿದೆ.
4. ನೀರಿನ ಬೇಡಿಕೆ ಗಮನಿಸಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯ ಪ್ರಗತಿಯಲ್ಲಿವೆ.
5. ಕಾವೇರಿ ಮೂಲದಿಂದ ಪಂಪ್ ಮಾಡುವ ಮುಖ್ಯ ಸ್ಥಾವರಗಳಲ್ಲಿ ಮತ್ತು ನಗರದ ಪಂಪಿಂಗ್ ಸ್ಥಾವರಗಳಲ್ಲಿ ವಿದ್ಯುತ್ ವ್ಯತ್ಯಯ ಆಗದೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಬೆಸ್ಕಾಂ ಜೊತೆ ವ್ಯವಹರಿಸಲಾಗಿದೆ.